**ದಿನಾಂಕ:10.02.2014ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಹಾಗೂ ಅಧ್ಯಕ್ಷರು, ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಅಪಂ.ರಾಜ್ ಇಲಾಖೆ.
2. ಮುಖ್ಯ ಇಂಜಿನಿಯರ್, PRED, ಬೆಂಗಳೂರು.
3. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ.ರಾಜ್ ಇಲಾಖೆ.
4. ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ), ಗ್ರಾಅಪಂ.ರಾಜ್ ಇಲಾಖೆ.

ಮುಖ್ಯ ಇಂಜಿನಿಯರ್, PREDರವರು ಸಮಿತಿಯ ಮುಂದೆ ಕೆಳಕಂಡ 3 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ತಾಂತ್ರಿಕ ಸಮರ್ಥನೆಯನ್ನು ನೀಡಿ ಟೆಂಡರ್ ಪ್ರಸ್ತಾಪಗಳಿಗೆ ಸಂಬಂಧಿಸಿದಂತೆ ಹಾಗೂ ಒಂದು O&M ಟೆಂಡರ್‌ಗೆ ಅನುಮೋದನೆ ಕೋರಿದರು.

| ಕ್ರ.ಸ | ಕಾಮಗಾರಿ ಹೆಸರು | ಟೆಂಡರ್ ಗಿಟ್ಟ ಮೊತ್ತ | ಸಿಎಸ್‌ಆರ್ ದರಗಳನ್ವಯ ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) | ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ / ಶೇಕಡ ಹೆಚ್ಚುವರಿ | | | ಸಂಧಾನದ ಟೆಂಡರ್ ಮೊತ್ತ / ಶೇಕಡ ಹೆಚ್ಚುವರಿ | | ಷರಾ |
|---|---|---|---|---|---|---|---|---|---|
| | | | | ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತದ ಮೇಲೆ ಶೇಕಡ ಹೆಚ್ಚುವರಿ | ಶೇಕಡ ಹೆಚ್ಚುವರಿ **ಸಿಎಸ್‌ಆರ್** ದರಗಳ ಮೇಲೆ | ಗುತ್ತಿಗೆದಾರರು ಸಂಧಾನದಲ್ಲಿ ಒಪ್ಪಿರುವ ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) | ಶೇಕಡ. ಹೆಚ್ಚು / ಕಡಿಮೆ **(ಸಿಎಸ್‌ಆರ್ ದರದಂತೆ)** | |
| 1 | ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕಿನ ಅನಗೋಡು ಮತ್ತು ಇತರೆ 18 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | 1135.69 | 1170.77 | 1382.03 | 21.69% ಹೆಚ್ಚು | 18.04% ಹೆಚ್ಚು | 1315.21 | 12.34% ಹೆಚ್ಚು | 1ನೇ ಕರೆ |
| 2 | ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕಿನ ಅಣಜಿ, ಬೇತೂರು ಮತ್ತು ಇತರೆ 26 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | 1895.75 | 1973.70 | 2227.48 | 17.50% ಹೆಚ್ಚು | 12.86% ಹೆಚ್ಚು | 2217.48 | 12.34% ಹೆಚ್ಚು | 1ನೇ ಕರೆ |
| 3 | ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಹಳ್ಳಿಮೈಸೂರು ಮತ್ತು ಇತರೆ 16 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | 977,99 | 953.43 | 1318.67 | 34.83% ಹೆಚ್ಚು | 38.31% ಹೆಚ್ಚು | 1125.04 | 18% ಹೆಚ್ಚು | 3ನೇ ಕರೆ |
| ವಾರ್ಷಿಕ ನಿರ್ವಹಣೆ (O&M) ಕಾಮಗಾರಿ ಟೆಂಡರ್ ವಿವರ | | | | | | | | | |
| 1 | ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕಿನ ಹದಡಿ ಮತ್ತು ಇತರೆ 15 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆ ವಾರ್ಷಿಕ ನಿರ್ವಹಣೆ (O&M) ಕಾಮಗಾರಿ | 20.35 | | 1ನೇವರ್ಷ:23.40<br>2ನೇವರ್ಷ:24.44<br>3ನೇವರ್ಷ:25.44 | 14.99% ಹೆಚ್ಚು<br>19.99% ಹೆಚ್ಚು<br>24.99% ಹೆಚ್ಚು | - | 1ನೇವರ್ಷ:23.40<br>2ನೇವರ್ಷ:24.42<br>3ನೇವರ್ಷ:24.83 | 14.99% ಹೆಚ್ಚು<br>19.99% ಹೆಚ್ಚು<br>22% ಹೆಚ್ಚು | 3ನೇ ಕರೆ |

ಟೆಂಡರ್ ಪರಿಶೀಲನಾ ಸಮಿತಿಯು MVS ಯೋಜನೆಗಳಿಗೆ ಸಂಬಂಧಿಸಿದಂತೆ ಟೆಂಡರ್ ಪ್ರೀಮಿಯಂ ಒಪ್ಪಿಕೊಳ್ಳುವ ಸಂಬಂಧ ಶಿಫಾರಸ್ಸು ಮಾಡುವಾಗ ಪರಿಗಣಿಸಲಾಗಿದೆಯೆನ್ನಲಾದ ಐಟಂವಾರು ಸಮರ್ಥನೆ ಮತ್ತು ಹೆಚ್ಚಳದ ಕಾರ್ಣಗಳನ್ನು ಕುರಿತು ಚರ್ಚಿಸುವಾಗ, CE,PREDರವರು ಕ್ರಮ ಸಂಖ್ಯೆ 1,2 ಮತ್ತು 3ರಲ್ಲಿರುವ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ದಿನಾಂಕ:01.01.2014ರ ಟೆಂಡರ್ ಅಂಗೀಕಾರ ಸಮಿತಿಯಲ್ಲಿ ಮರು ಸಂಧಾನ ನಡೆಸಿ ಸಲ್ಲಿಸಲು ತಿಳಿಸಿದ ರೀತ್ಯಾ ಕ್ರಮ ಸಂಖ್ಯೆ 1ರ ಯೋಜನೆಯಲ್ಲಿ ರೂ.30.00ಲಕ್ಷ, ಕ್ರಮ ಸಂಖ್ಯೆ 2ರ ಯೋಜನೆಗೆ ರೂ.10.00ಲಕ್ಷ ಮತ್ತು ಕ್ರಮ ಸಂಖ್ಯೆ 3ರ ಯೋಜನೆಗೆ ರೂ.9.00ಲಕ್ಷದಷ್ಟು ಗುತ್ತಿಗೆದಾರರು ಕಡಿಮೆ ಮಾಡಿರುವುದಾಗಿ ತಿಳಿಸಿದರು.

ಅನುಮೋದಿತ CSR ಮೊತ್ತಕ್ಕಿಂತ 12.34% ಜಾಸ್ತಿ ನಮೂದಿಸಿರುವ ಕ್ರಮಸಂಖ್ಯೆ:1ರಲ್ಲಿನ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕಿನ ಅನಗೋಡು ಮತ್ತು ಇತರೆ 18 ಗ್ರಾಮಗಳ ಯೋಜನೆ, 12.34% ಹೆಚ್ಚಿರುವ ಕ್ರಸಂ:2ರಲ್ಲಿನ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕಿನ ಅಣಜಿ, ಬೇತೂರು ಮತ್ತು ಇತರೆ 26 ಗ್ರಾಮಗಳ ಯೋಜನೆಗಳಿಗೆ ಸಂಬಂಧಿಸಿದಂತೆ 1ನೇ ಟೆಂಡರ್ ಕರೆಯಾಗಿರುವುದರಿಂದ ಮತ್ತು ಒಬ್ಬರೆ ಗುತ್ತಿಗೆದಾರರು ಮೊದಲನೆ ಕರೆಗೆ ಭಾಗವಹಿಸಿರುವುದರಿಂದ ಮತ್ತು CSR ಮೊತ್ತಕ್ಕಿಂತ ಬಹಳ-ಜಾಸ್ತಿ ಇರುವುದರಿಂದ ಇಂತಹ ಪ್ರಕರಣಗಳಲ್ಲೂ ಅನುಮೋದಿಸುವುದು ಸರಿಯಿಲ್ಲವೆಂದು ಸಮಿತಿ ಪರಿಗಣಿಸಿತು. ಅಂತೆಯೇ, ಅಲ್ಪಾವಧಿ ಟೆಂಡರ್ ನೋಟಿಫಿಕೇಷನ್ (15ದಿನ) ನೀಡಿ ಮರು ಟೆಂಡರ್ ಕರೆಯಲು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಸೂಚಿಸಲಾಯಿತು.

ಟೆಂಡರ್ ಮೊತ್ತ CSR ಮೊತ್ತಕ್ಕಿಂತ 18% ಜಾಸ್ತಿ ನಮೂದಿಸಿರುವ ಕ್ರಸಂ.3ರಲ್ಲಿನ ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಹಳ್ಳಿಮೈಸೂರು ಮತ್ತು ಇತರೆ 16 ಗ್ರಾಮಗಳ ಯೋಜನೆಗಳ ಟೆಂಡರ್ ಪ್ರಸ್ತಾಪಕ್ಕೆ ಇದು **3ನೇ ಕರೆಯಾಗಿರುವ ಕಾರಣ,** ಅನುಮೋದನೆ ನೀಡಲು ನಿರ್ಧರಿಸಲಾಯಿತು.

ಇನ್ನು ಮುಂದೆ ಟೆಂಡರ್ ಕರೆದಾಗ ಮೊದಲನೆ ಕರೆಗೆ ಏಕೈಕ ಗುತ್ತಿಗೆದಾರರು ಭಾಗವಹಿಸಿದಲ್ಲಿ ಆರ್ಥಿಕ ಬಿಡ್‌ಗಳನ್ನು ತೆರೆಯದೆ ಮರು ಟೆಂಡರ್ ಕರೆಯುವುದು ಸೂಕ್ತವೆಂದು ನಿರ್ಧರಿಸಿ ಅದರಂತೆ ಕ್ರಮವಹಿಸಲು CE,PREDಗೆ ತಿಳಿಸಲಾಯಿತು. PMGSYನಡಿ ಈ ಪರಿಕ್ರಮ ಅನುಸರಿಸುತ್ತಿರುವುದನ್ನು ಸಮಿತಿ ಗಮನಿಸಿ, ಈ ಕುರಿತಂತೆ ಟೆಂಡರ್ ಪ್ರಕಟಣೆಯಲ್ಲಿಯೇ ಸೂಕ್ತ ನಮೂದು ಮಾಡಲು ಸಹ ಟೆಂಡರ್ ಪ್ರಕಟಣೆ ಹೊರಡಿಸುವಾಗ ಎಲ್ಲಾ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು ಜಾಗ್ರತೆ ವಹಿಸುವಂತೆ, CE,PREDರವರು ನೋಡಿಕೊಳ್ಳಬೇಕೆಂದು ಸೂಚಿಸಲಾಯಿತು.

ವಾರ್ಷಿಕ ನಿರ್ವಹಣೆ ಕಾಮಗಾರಿ ಟೆಂಡರ್‌ಗೆ ಸಂಬಂಧಿಸಿದಂತೆ ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕಿನ ಹದಡಿ ಮತ್ತು ಇತರೆ 15 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಟೆಂಡರ್‌ನ್ನು 3 ವರ್ಷಗಳ ವಾರ್ಷಿಕ ನಿರ್ವಹಣೆಗಾಗಿ- ಇದು 3ನೇ ಕರೆಯಾಗಿರುವ ಕಾರಣ ಅನುಮೋದಿಸಲಾಯಿತು ಹಾಗೂ O&M ಟೆಂಡರ್ ಕರೆಯುವಾಗ ಜಿಲ್ಲಾವಾರು ಪ್ಯಾಕೇಜ್ ಮಾಡಿ ಟೆಂಡರ್ ಕರೆಯಲು ಎಲ್ಲಾ PREDಗಳಿಗೂ ಮತ್ತೊಮ್ಮೆ ನಿರ್ದೇಶನ ನೀಡುವಂತೆ CE,PREDಗೆ ಅಧ್ಯಕ್ಷರು ತಿಳಿಸಿದರು.

ಸಹಿ/-
(ಟಿ.ಎಂ.ವಿಜಯ ಭಾಸ್ಕರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ
ಅಧ್ಯಕ್ಷರು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸಂಖ್ಯೆ:ಗ್ರಾಅಪ 15 ಗ್ರಾನೀಸ (5)13 ದಿನಾಂಕ:15.02.2014

ಗೆ:
ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಇಮೇಲ್: rk3452000@gmail.com
ಫೋನ್:22032806, ಫ್ಯಾಕ್ಸ್:22203175

15/2/14